ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೇ | ಜಲೋತ್ಸವ | ಮನೆ ಮನೆಗೆ ಗಂಗೆ ಜಲ ಜೀವನ ಮಿಷನ್

# ಸಮುದಾಯದ ಸಹಭಾಗಿತ್ವದಿಂದ ಜಲ ಜೀವನ್ ಮಿಷನ್ ಯಶಸ್ವಿ ಅನುಷ್ಠಾನ ಸಾಧ್ಯ



ಚಿತ್ರದುರ್ಗ ಜಿಲ್ಲೆಯು ಐತಿಹಾಸಿಕ ಮಹತ್ವವನ್ನು ಹೊಂದಿರುವ ಸ್ಥಳವಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ 6 ತಾಲ್ಲೂಕು, 189 ಗ್ರಾಮ ಪಂಚಾಯಿತಿ, 3,80,788 ಮನೆಗಳು ಮತ್ತು 16,23,047 ಜನಸಂಖ್ಯೆಯನ್ನು ಹೊಂದಿದೆ. ಚಿತ್ರದುರ್ಗ ತಾಲ್ಲೂಕು 38 ಗ್ರಾಮ ಪಂಚಾಯಿತಿಗಳು, 4 ಹೋಬಳಿ ಕೇಂದ್ರಗಳನ್ನು ಒಳಗೊಂಡಿದೆ. ಪಾಪೇನಹಳ್ಳಿ ಗ್ರಾಮವು ಮಾಡನಾಯಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ ಮತ್ತು ತಾಲ್ಲೂಕು ಕೇಂದ್ರದಿಂದ ಸುಮಾರು 10ಕಿ.ಮೀ ದೂರದಲ್ಲಿದೆ. ಪಾಪೇನಹಳ್ಳಿ ಗ್ರಾಮದಲ್ಲಿ 210 ಮನೆಗಳಿವೆ ಮತ್ತು 874 ಜನಸಂಖ್ಯೆ ಹೊಂದಿದೆ. ಗ್ರಾಮದಲ್ಲಿ ಒಂದು ಶಾಲೆ, ಒಂದು ಅಂಗನವಾಡಿ ಕೇಂದ್ರ ಮತ್ತು ದೇವಸ್ಥಾನವಿದೆ.

ಪಾಪೇನಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿತ್ತು. ಅದರಲ್ಲೂ ಬೇಸಿಗೆಯ ಕಾಲದಲ್ಲಿ ಬೋರ್ವೆಲ್ ಗಳು ಬತ್ತಿ ಹೋಗುತ್ತಿದ್ದರಿಂದ ಜನರು ದೂರದ ಸ್ಥಳಗಳಿಂದ ತಳ್ಳುವ ಗಾಡಿ, ಟ್ಯಾಂಕರ್ ಗಳ ಮೂಲಕ ಕುಡಿಯುವ ನೀರನ್ನು ತರುತ್ತಿದ್ದರು. ಪಾಪೇನಹಳ್ಳಿ ಗ್ರಾಮದಲ್ಲಿ ಕೈಪಂಪ್ ಮೂಲಕ ಜನರು ನೀರನ್ನು ತರುತ್ತಿದ್ದರು. ಆದರೆ ಆ ಕೈಪಂಪ್ ಸಹ ಮಳೆಯ ಕೊರತೆಯಿಂದ ಬತ್ತಿ ಹೋಗಿದ್ದರಿಂದ ಗ್ರಾಮ ಪಂಚಾಯಿತಿ ವತಿಯಿಂದ ಕೊಳವೆಬಾವಿ ಕೊರೆಸಲಾಯಿತು. ಆ ಕೊಳವೆಬಾವಿಯಿಂದ ವಿದ್ಯುತ್ ಇದ್ದ ಸಂದರ್ಭದಲ್ಲಿ ಮಾತ್ರ ನೀರು ಸರಬರಾಜು ಆಗುತಿತ್ತು. ಗ್ರಾಮದ ಎಲ್ಲಾ ಮನೆಗಳಿಗೂ ಆ ನೀರು ಸಾಕಾಗುತ್ತಿರಲಿಲ್ಲ. ಈ ರೀತಿ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಜಟಿಲವಾಗುತ್ತಿತ್ತು.



ಈ ಸಮಯದಲ್ಲಿ ಜಲ ಜೀವನ್ ಮಿಷನ್ ಕುರಿತು ಗ್ರಾಮಸ್ಥರು ಅರಿತು ಮೊದಲಿಗೆ ಸಂತಸಪಟ್ಟರು. ಆದರೆ ನಂತರ ಯೋಜನೆಯ ಕುರಿತ ಕೆಲವು ತಪ್ಪು ತಿಳುವಳಿಕೆಗಳಿಂದ ವಿರೋಧ ವ್ಯಕ್ತಪಡಿಸಿದರು.ನಳ ಸಂಪರ್ಕಕ್ಕೆ ಮೀಟರ್ ಅಳವಡಿಸುವುದರಿಂದ ಯೋಜನೆಯು ಬೇಡವೆಂದು ತಿಳಿಸಿದರು. ಜೆ.ಜೆ.ಎಂ ಯೋಜನೆಯಲ್ಲಿ ಕಲುಷಿತ ನದಿ ನೀರನ್ನು ನೇರವಾಗಿ ಸಾರ್ವಜನಿಕರಿಗೆ ಪೂರೈಕೆ ಮಾಡಲಾಗುತ್ತದೆ ಎಂದು ತಪ್ಪು ತಿಳಿದಿದ್ದರು. ಮೀಟರ್ ಓಡಿದರೆ ವಿಪರೀತ ನೀರಿನ ಕಂದಾಯವನ್ನು ಕಟ್ಟಬೇಕಾಗುತ್ತದೆ ಹಾಗೂ ದನಕರುಗಳಿಗೆ ನೀರನ್ನು ಕೊಡುವುದಿಲ್ಲ ಎಂಬುದಾಗಿ ಸಾರ್ವಜನಿಕರು ತಿಳಿದಿದ್ದರು.

ಈ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಗ್ರಾಮ ಕ್ರಿಯಾ ಯೋಜನೆ, ವಿದ್ಯಾರ್ಥಿಗಳಿಂದ ಜಾಥಾ ಕಾರ್ಯಕ್ರಮ, ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ ತರಬೇತಿ, ಎಫ್.ಟಿ.ಕೆ ಕುರಿತು ತರಬೇತಿ, ವಿಶೇಷ ಗ್ರಾಮಸಭೆ, ಬೀದಿನಾಟಕಗಳು, ಆರೋಗ್ಯ ಮತ್ತು ನೈರ್ಮಲ್ಯದ ಕುರಿತಾದ ಕಿರುಚಿತ್ರಗಳ ಪ್ರದರ್ಶನ, ಮನೆ ಮನೆಗೂ ಭೇಟಿ ನೀಡಿ ಗ್ರಾಮಸ್ಥರಿಗೆ ಜಲ ಜೀವನ್ ಮಿಷನ್ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಗ್ರಾಮ ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಚುನಾಯಿತ ಪ್ರತಿನಿಧಿಗಳು, ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯ ಸದಸ್ಯರು, ಆಶಾ/ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗ್ರಾಮದ ಮುಖಂಡರು ಜಲ ಜೀವನ್ ಮಿಷನ್ ಯೋಜನೆಯನ್ನು ಕಾರ್ಯಗತಗೊಳಿಸಲು ಬೆಂಬಲ ನೀಡಿದರು.





ಜೆ.ಜೆ.ಎಂ ಯೋಜನೆಯಲ್ಲಿ ಮೀಟರ್ ಅಳವಡಿಕೆ ಬಗೆಗಿನ ಗೊಂದಲವನ್ನು ಬಗೆಹರಿಸಿ, ಅದರ ಉದ್ದೇಶವನ್ನು ತಿಳಿಸಲಾಯಿತು. ಗ್ರಾಮಸ್ಥರು ಯೋಜನೆಗೆ ಸಮುದಾಯ ವಂತಿಗೆಯನ್ನು ನೀಡಿ ಯೋಜನೆಗೆ ಕೈಜೋಡಿಸಿದರು.

ಜೆ.ಜೆ.ಎಂ.ನ ಅಡಿಯಲ್ಲಿ ಮನೆ ಮನೆಗೆ ಗಂಗೆ ಎಂಬ ಘೋಷವಾಕ್ಯದೊಂದಿಗೆ 46.59 ಲಕ್ಷ ರೂಪಾಯಿ ವೆಚ್ಚದಲ್ಲಿ ಕುಡಿಯುವ ನೀರಿನ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸಲಾಯಿತು. ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಯಿತು.

ಪ್ರಸ್ತುತ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಶುದ್ದ ಕುಡಿಯುವ ನೀರಿನ ಸೌಲಭ್ಯ ದೊರಕಿರುವುದರಿಂದ ಗ್ರಾಮಸ್ಥರ ಆರೋಗ್ಯದ ಸ್ಥಿತಿಯಲ್ಲಿ ಸುಧಾರಣೆ ಕಂಡುಬಂದಿದೆ

**ನೀರು ಮತ್ತು ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ ಪರಿಹಾರ ಸಹಾಯವಾಣಿ 9480985555 ಗೆ ಕರೆ ಮಾಡಿ**